ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಕಾಲೇಜಿನ ತರಗತಿಗಳನ್ನು, ಪ್ರೌಢಶಾಲಾ ವಿಭಾಗದಲ್ಲಿ ಲಭ್ಯವಿರುವ ಕೊಠಡಿಗಳಲ್ಲಿ ನಡೆಸಲಾಗುತ್ತಿದೆ. ಅನುದಾನ ಲಭ್ಯತೆಯನ್ನು ಅಧರಿಸಿ, ಹಂತ ಹಂತವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಒದಗಿಸಲಾಗುವುದು.

ಎಂ.ಆರ್. ಡಬ್ಲ್ಯೂ ಅಂಡ್ ವಿ.ಆರ್. ಡಬ್ಲ್ಯೂ ನೌಕರರ ಗೌರವ ಧನ

171 : (79)

ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)

ಅ) ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಯೋಜನೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (MRW) ಮತ್ತು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು (VRW) ಗಳ ಸೇವೆಯನ್ನು ಖಾಯಂಗೊಳಿಸುವ ಮತ್ತು ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರ ಈ ಸಂಬಂಧವಾಗಿ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು) ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಪ್ರಸ್ತುತ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ. 700/– ಗಳ ಗೌರವಧನವನ್ನು ಹಾಗೂ ರೂ. 50/– ಪ್ರವಾಸ, ಲೇಖನ ಸಾಮಗ್ರಿ ವೆಚ್ಚವೆಂದು ನೀಡಲಾಗುತ್ತಿದೆ. ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮಾಸಿಕ ರೂ. 1800/– ಗಳ ಗೌರವಧನವನ್ನು ಹಾಗೂ ರೂ. 200/– ಪ್ರವಾಸ, ಲೇಖನ ಸಾಮಗ್ರಿ ವೆಚ್ಚವೆಂದು ನೀಡಲಾಗುತ್ತಿದೆ. ಈ ಕಾರ್ಯಕರ್ತರು ಪೂರ್ಣಕಾಲಿಕ ನೌಕರರಲ್ಲವಾದ್ದರಿಂದ ಅವರುಗಳ ಸೇವೆಯನ್ನು ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳು ಗೌರವಧನವನ್ನು ಹೆಚ್ಚಿಸುವಂತೆ ಬೇಡಿಕೆ

ಸಲ್ಲಿಸಿರುತ್ತಾರೆ. ಇವರುಗಳು ಅಂಗವಿಕಲರನ್ನು ಗುರುತಿಸುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ. ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ಅರಿವು ಮೂಡಿಸಿರುವುದು. ಅಂಗವಿಕಲರಿಗೆ ದೊರೆಯಬಹುದಾದ ಇಲಾಖಾ ಸೌಲಭ್ಯವನ್ನು ಅರ್ಹ ಅಂಗವಿಕಲರಿಗೆ ದೊರಕಿಸಲು ಪ್ರಯತ್ನಿಸಿರುವ ಅಂಕಿ ಅಂಶಗಳ ವಿವರ, ಎಂ.ಆರ್.ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂ.ಗಳು ಇಲಾಖಾ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಜರುಗಿಸಿದ ಪರಿಶೀಲನಾ ಸಭೆಗೆ ಹಾಜರಾಗಿರುವ ಕುರಿತು ಹಾಗೂ ಇವರ ಕೆಲಸ ಕಾರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕಾರ್ಯಾಧ್ಯಯನ ನಡೆಸಲಾಗುತ್ತಿದ್ದು. ವರದಿ ಸ್ವೀಕರಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ನಂಜುಂಡಪ್ಪ ವರದಿಯನ್ವಯ ಅನುದಾನ ಬಿಡುಗಡೆ

149 : (252)

ಶ್ರೀ ರಹೀಂ ಖಾನ್ (ಬೀದರ್)

ಅ) ಡಾ॥ ಡಿ.ಎಂ. ನಂಜುಂಡಪ್ಪ ವರದಿಯನ್ವಯ ಹೈದರಾಬಾದ್ ಕರ್ನಾಟಕ ಪ್ರದೇಶದ ಅತಿ ಹಿಂದುಳಿದ ಬೀದರ್ ಜಿಲ್ಲೆಯ ಬೀದರ್ (ಉ) ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರವು ಇದುವರೆಗೂ ನಿಗದಿಪಡಿಸಿದ್ದ ಹಾಗೂ ಬಿಡುಗಡೆಯಾದ ಅನುದಾನ ಎಷ್ಟು (ಮೂರು ವರ್ಷದ ಮಾಹಿತಿ ಒದಗಿಸುವುದು);

ಆ) ಈ ಅನುದಾನವನ್ನು ಇದುವರೆಗೂ ಯಾವ ಯಾವ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ (ಇಲಾಖಾವಾರು ಯೋಜನಾವಾರು ಸಂಪೂರ್ಣ ಮಾಹಿತಿ ಒದಗಿಸುವುದು);

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಬೀದರ್ ತಾಲ್ಲೂಕು ಹಿಂದುಳಿದ ತಾಲ್ಲೂಕುಗಳಲ್ಲಿ ಸೇರಿರುವುದಿಲ್ಲವಾದ್ದರಿಂದ ಬೀದರ್ ತಾಲ್ಲೂಕಿಗೆ ಡಾ॥ ನಂಜುಂಡಪ್ಪ ವರದಿಯಂತೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ನಿಗದಿಪಡಿಸಿರುವುದಿಲ್ಲ. ಬೀದರ್ ಮತಕ್ಷೇತ್ರವು ಬೀದರ್ ತಾಲ್ಲೂಕಿನ ಭಾಗವಾಗಿರುತ್ತದೆ.

ಆ) ಅನ್ವಯಿಸುವುದಿಲ್ಲ.